
ಸಾಕು, ಥಟ್ಟನೆ ಕೃಷ್ಣರಾಜ ಸಾಗರ ಕಣ್ಣಮುಂದೆ ಬರುತ್ತದೆ. ಮೈಸೂರು ನೋಡಲು ಹೊರಟವರಿಗೆ ಅರಮನೆ, ಚಾಮುಂಡಿ ಬೆಟ್ಟ ಮತ್ತು ಕೆ.ಆರ್.ಎಸ್. ನೋಡಲೇಬೇಕಾದ ತ್ರಿಕೋನ ಬಿಂದುಗಳು. ಇವುಗಳಲ್ಲಿ ಯಾವುದಾದರೊಂದನ್ನು ಬಿಟ್ಟರೂ ಪ್ರವಾಸ ಅಪೂರ್ಣ.

ಕೆ.ಆರ್.ಎಸ್. ಕಟ್ಟಿಸಿದವರು ಯಾರು ಅಂದರೆ ಅದರ ಹೆಸರಲ್ಲಿ ಇರುವಂತೆ ಥಟ್ಟನೆ ಹೇಳಬಹುದು – ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದು. ವಿಧಾನಸೌಧ ಕಟ್ಟಿಸಿದವರು ಯಾರು ಎಂದರೆ ಥಟ್ಟನೆ ಕೆಂಗಲ್ ಹನುಮಂತಯ್ಯ ಅವರ ಹೆಸರು ಕಣ್ಣಮುಂದೆ ಬಂದಂತೆ. ಆದರೆ ಇತ್ತೀಚೆಗೆ ಕೆ.ಆರ್.ಎಸ್. ಕುರಿತು ಆಗಾಗ ವಿವಾದಿತ ಹೇಳಿಕೆಗಳು ಮುನ್ನೆಲೆಗೆ ಬರುತ್ತಿವೆ. ಕೆ.ಆರ್.ಎಸ್. ಹೆಸರಿನ ಜೊತೆಗೆ ಅದರ ನಿರ್ಮಾಣದ ಹೊಣೆ ಹೊತ್ತ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರೂ ಜೋಡಣೆಯಾಗುತ್ತದೆ. 'ವಿಶ್ವೇಶ್ವರಯ್ಯ ಶ್ರಮಪಡದಿದ್ದರೆ ಕನ್ನಂಬಾಡಿಯ ಕಟ್ಟದಿದ್ದರೆ' ಎಂಬ ಚಲನಚಿತ್ರ ಗೀತೆಯು ಜನರ ನಾಲಗೆಯ ಮೇಲೆ ಈಗಲೂ ನಲಿದಾಡುತ್ತಿದೆ. ಹಾಗಾದರೆ, ಕನ್ನಂಬಾಡಿ ಕಟ್ಟೆ ನಿರ್ಮಾಣಕ್ಕೆ ವಿಶ್ವೇಶ್ವರಯ್ಯನವರ ಕೊಡುಗೆ ಏನು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿಯಾದರೂ ಇಲ್ಲಿ ಕೆಲವು ಅಂಶಗಳನ್ನು ದಾಖಲಿಸಬೇಕಾಗುತ್ತದೆ. ಇದು ಚರಿತ್ರೆಯ ಹೊಸ ಅಧ್ಯಾಯವೂ ಅಲ್ಲ, ಹೊಸ ಪುಟವೂ ಅಲ್ಲ. ಸಾರ್ವಜನಿಕವಾಗಿ ಸಾಕಷ್ಟು ತಿಳಿದಿರುವ ಸಂಗತಿಯೇ.

ಕೆ.ಆರ್.ಎಸ್. ಕಟ್ಟುವ ಮೊದಲು 1911ರಲ್ಲಿ ಆ ಜಾಗದಲ್ಲಿ ಶಂಕುಸ್ಥಾಪನೆ ಮಾಡುವಾಗ, 1794ರಲ್ಲಿ ಟಿಪ್ಪುಸುಲ್ತಾನ್, ಪರ್ಷಿಯನ್ ಭಾಷೆಯಲ್ಲಿ ಕೆತ್ತಿಸಿದ ಕಲ್ಲು ಸಿಕ್ಕಿತು. ಅದರಲ್ಲಿ ಕಾವೇರಿ ನದಿಗೆ ಇದೇ ಜಾಗದಲ್ಲಿ ಅಣೆಕಟ್ಟು ಕಟ್ಟಬೇಕೆಂಬ ಪ್ರಸ್ತಾವವಿತ್ತು. ಈ ಯೋಜನೆಗೆ ಅಡ್ಡ ಬಂದವರನ್ನು ಸೈತಾನರೆಂದು ಭಾವಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ಟಿಪ್ಪು ನೀಡಿದ್ದ. ಈಗ ಆ ಕಲ್ಲು ಅಣೆಕಟ್ಟಿನ ಮುಖ್ಯದ್ವಾರದಲ್ಲಿ ಇಂಗ್ಲಿಷ್ ಮತ್ತು ಕನ್ನಡದ ಅನುವಾದದ ಸಹಿತ ಕಂಡುಬರುತ್ತದೆ. ಇದರರ್ಥ, ಟಿಪ್ಪುವಿಗೆ ಮೈಸೂರು ಅಭಿವೃದ್ಧಿಯ ಗುರಿ ಇತ್ತು ಎಂದು ಸಾಧಿಸಲು ಹೊರಟವರಿಗೆ ಈ 'ಟಿಪ್ಪು ಕಲ್ಲು' ಒದಗಿಬರಬಹುದು. ಆದರೆ, ಕಟ್ಟೆ ಕಟ್ಟುವ ಟಿಪ್ಪು ಕನಸು ಎಂದೂ ಕೈಗೂಡಿಬರಲಿಲ್ಲ. ಬಹುಶಃ ಆತನ ಕನಸುಗಳಲ್ಲಿ ಇದೂ ಒಂದು ಆಗಿರಬಹುದು. ಕೃಷ್ಣರಾಜಸಾಗರ ವಿಶ್ವೇಶ್ವರಯ್ಯನವರಿಗಿಂತ ಮೊದಲೇ ಟಿಪ್ಪುವಿನ ಮನಸ್ಸಿನಲ್ಲಿತ್ತು ಎಂದು ವಾದಿಸುವವರಿಗೆ ಇದೂ ಒಂದು ಎಳೆಯಾಗಬಹುದು.




ಲಲಿತ್ ಮಹಲ್ ಅರಮನೆ ನಿರ್ಮಾಣಕ್ಕೆ 1921ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಶಿಲಾನ್ಯಾಸ ಮಾಡಿದ ದಾಖಲೆ

ಕೆ. ಶೇಷಾದ್ರಿ ಅಯ್ಯರ್ ಅವರು ದಿವಾನರಾಗಿದ್ದಾಗಲೇ (1885–1901) ಕೆ.ಜಿ.ಎಫ್. ಚಿನ್ನದ ಗಣಿಗೆ ಶಿವನಸಮುದ್ರದಿಂದ ವಿದ್ಯುತ್ ಪೂರೈಕೆ ಮಾಡಿ ಚರಿತ್ರೆಯನ್ನೇ ಸೃಷ್ಟಿಸಿದರು. ಅನಂತರ ಬೆಂಗಳೂರು, ಮೈಸೂರು ನಗರಗಳಿಗೆ ವಿದ್ಯುತ್ ಪೂರೈಕೆಯಾಯಿತು. ಆದರೆ ಬೇಸಗೆ ಕಾಲದಲ್ಲಿ ಶಿವನಸಮುದ್ರದಲ್ಲಿ ನೀರಿನ ಹರಿವು ಕಡಿಮೆ ಆಗುತ್ತಿದ್ದುದರಿಂದ, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿತ್ತು. ಚಿನ್ನದ ಗಣಿಗಳ ಮಾಲೀಕರಾಗಿದ್ದ ಜಾನ್ ಟೇಲರ್ ಕಂಪನಿ ಇದನ್ನು ಮಹಾರಾಜರ ಗಮನಕ್ಕೆ ತಂದು ಪರಿಹಾರ ಸೂಚಿಸಲು, ಹೆಚ್ಚಿನ ವಿದ್ಯುತ್ ಪೂರೈಕೆ ಮಾಡುವ ಕೋರಿಕೆ ಸಲ್ಲಿಸಿದರು. ರಾಜ್ಯದ ಆಗಿನ ಮುಖ್ಯ ಎಂಜಿನಿಯರ್ ಮೆಕಾಚಿನ್ ಅವರನ್ನು ಕೋರಿದಾಗ, ಆತ ವಿದ್ಯುತ್ ಉತ್ಪಾದನೆಯೊಂದನ್ನೇ ಗುರಿಯಾಗಿಟ್ಟುಕೊಂಡು ಕನ್ನಂಬಾಡಿ ಬಳಿ ಕಟ್ಟೆ ಕಟ್ಟಿ 40 ಮೈಲಿ ದೂರಕ್ಕೆ ಪೈಪಿನ ಮೂಲಕ ನೀರು ಹರಿಸಿ ಶಿವನಸಮುದ್ರದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಮಾಡಬಹುದು ಎಂದು ಸಲಹೆ ಕೊಟ್ಟ. ಸರ್ಕಾರ ಈ ಕುರಿತು ಚರ್ಚಿಸಿ, ಇದು ಕಾರ್ಯಸಾಧುವಲ್ಲ ಎಂಬ ತೀರ್ಮಾನಕ್ಕೆ ಬಂತು. ಏಕೆಂದರೆ ಅದು ದುಬಾರಿ ಖರ್ಚಿನದು ಎಂದು



## ಅಣೆಕಟ್ಟೆಗಾಗಿ ವಜ್ರ ವೈಢೂರ್ಯದ ಮಾರಾಟ

ವಿಶ್ವೇಶ್ವರಯ್ಯನವರು 'ನೀರಾವರಿಗಾಗಿ ಮಾಡುವ ವೆಚ್ಚ ಒಂದು ಪ್ರದೇಶದ ಜೀವನ ಸ್ಥಿತಿಯನ್ನು ಮೇಲೆತ್ತುವ ಕಾರ್ಯಕ್ಕೆ ಮಾಡುವ ವೆಚ್ಚ'ವೆಂದು ಪ್ರತಿಪಾದಿಸಿದರು. ನೀರಾವರಿ ಕೇವಲ ಜಮೀನುಳ್ಳವರಿಗೆ ಮಾತ್ರ ಪ್ರಯೋಜನಕಾರಿಯಲ್ಲ, ಅದರಿಂದ ವ್ಯವಸಾಯ ಸಂಬಂಧಿತ ಚಟುವಟಿಕೆಗಳು ಹೆಚ್ಚುತ್ತವೆ. ವ್ಯವಸಾಯದ ಉಪಕರಣಗಳು, ಕ್ರಿಮಿನಾಶಕ ಗೊಬ್ಬರ ಇವುಗಳ ಉತ್ಪಾದನೆಗೆ ಬೇಡಿಕೆ ಹೆಚ್ಚುತ್ತದೆ. ವ್ಯವಸಾಯಕ್ಕೆ ಸಂಬಂಧಿಸಿದ ಉಪ ಕೈಗಾರಿಕೆಗಳು ಬೆಳೆಯುತ್ತವೆ. ಆಹಾರೋತ್ಪಾದನೆಯಿಂದ ರಾಷ್ಟ್ರೀಯ ವರಮಾನ ಹೆಚ್ಚುತ್ತದೆ, ರಾಜ್ಯಕ್ಕೆ ಪ್ರತ್ಯಕ್ಷ, ಪರೋಕ್ಷ ತೆರಿಗೆಗಳಿಂದ ಆದಾಯ ಬರುತ್ತದೆ' ಎಂದು ನೀರಾವರಿಗಾಗಿ ಮಾಡುವ ವೆಚ್ಚವನ್ನು ಸಮರ್ಥಿಸಿದರು. ಜತೆಗೆ ಈ ಯೋಜನೆ ಅಂಗೀಕೃತವಾಗದಿದ್ದಲ್ಲಿ ತಾವು ಸೇವೆಯಲ್ಲಿ ಮುಂದುವರಿಯಲು ಉತ್ಸುಕವಾಗಿಲ್ಲವೆಂದು ತಿಳಿಸಿದರು. ಹೀಗಾಗಿ ಮಹಾರಾಜರು ಯೋಜನೆಯ ಪ್ರತಿಯೊಂದು ವಿವರವನ್ನೂ ತಿಳಿದು, ತೃಪ್ತಿ ವ್ಯಕ್ತಪಡಿಸಿದರು ಮತ್ತು ಯಾವುದೇ ಬದಲಾವಣೆಗಳಿಲ್ಲದೆ ಯೋಜನೆ ಮಂಜೂರು ಮಾಡಿದರು. ಈ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ರಾಜಮಾತೆ ತೆಗೆದುಕೊಂಡ ತೀರ್ಮಾನ ಅಪರೂಪವಾದಂಥದ್ದು, ಅಪೂರ್ವವಾದದ್ದು. ಅರಮನೆಯ ರಾಜರ ಖಾಸಗಿ ಭಂಡಾರದಲ್ಲಿದ್ದ ನಾಲ್ಕು ಭಾರಿ ಮೂಟೆಗಳ ವಜ್ರ ವೈಢೂರ್ಯಗಳ ಆಭರಣಗಳು ಮತ್ತು ಬೆಳ್ಳಿ ರೂಪಾಯಿಗಳನ್ನು ಬೊಂಬಾಯಿಗೆ ತೆಗೆದುಕೊಂಡು ಹೋಗಿ, ಅಲ್ಲಿ ಮಾರಾಟ ಮಾಡಿ ಈ ಹಣವನ್ನು ಕನ್ನಂಬಾಡಿ ಕಟ್ಟೆಗೆ ವಿನಿಯೋಗಿಸಲಾಯಿತು. ಹೀಗೆ ಒಬ್ಬ ಜವಾಬ್ದಾರಿಯುತ ಮಹಾರಾಜ ತನ್ನ ನಾಡಿನ ಪ್ರಗತಿಪರ ಕಾರ್ಯಗಳಿಗೆ ನೀಡಿದ ಮೌಲ್ಯಯುತ ವೈಯಕ್ತಿಕ ಬೆಂಬಲವಿದು.

(ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ. ಎಂ. ಎಸ್. ಅನಿತಾ, 2016, ಪು: 153)